ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ದಿನಾಂಕ: 06–03–2024ರಂದು ನಡೆದ 46ನೆಯ ಹಣಕಾಸು ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 46ನೆಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:06.03.2024 ರಂದು ಬುಧವಾರ ಬೆಳಗ್ಗೆ 10.30ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. **ಡಾ. ಎಸ್ ಅಹಲ್ಯ,** ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. **ಶ್ರೀಮತಿ ಉಮಾ ಕೆ,** ಜಂಟೀ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
3. **ಪ್ರೊ. ವಿ ಗಿರೀಶ್‌ಚಂದ್ರ,** ಕುಲಸಚಿವರು, ಕಸಂವಿ — ಸದಸ್ಯರು
4. **ಶ್ರೀ. ಕುಮಾರ ಎಸ್,** ಉಪ ಕಾರ್ಯದರ್ಶಿ, (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. **ಪ್ರೊ. ವಿ ಗಿರೀಶ್‌ಚಂದ್ರ,** ಡೀನ್, ಕಸಂವಿ — ಸದಸ್ಯರು
6. **ಡಾ. ಭರತ್ ಕೆ.ಎ,** ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

**ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.**

| | |
|---|---|
| **ವಿಷಯ 1** | **45ನೇಯ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ.** |
| **ಟಿಪ್ಪಣಿ** | ದಿನಾಂಕ: 28.11.2023ರ ನಡಾವಳಿಯನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| **ನಿರ್ಣಯ** | **ಸ್ಥಿರೀಕರಿಸಿತು.** |
| **ವಿಷಯ 2** | **45ನೇಯ ಸಭೆಯ ನಡಾವಳಿಯಂತೆ ಕ್ರಮವಹಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ದಿನಾಂಕ: 28.11.2023ರ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| **ನಿರ್ಣಯ** | **ಅನುಮೋದಿಸಿತು.** |

| | |
|---|---|
| ವಿಷಯ 3 | **ನವೆಂಬರ್ 2023 ರಿಂದ ಡಿಸೆಂಬರ್ 2023ರ ವರೆಗಿನ (02) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ನವೆಂಬರ್ 2023 ರಿಂದ ಡಿಸೆಂಬರ್ 2023ರ ವರೆಗಿನ (02) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ 4 | **ವಿಶ್ವವಿದ್ಯಾಲಯದಲ್ಲಿ ನಿರ್ವಹಿಸುತ್ತಿರುವ ಕುಲಸಚಿವರ ಖಾತೆ ಸಂಖ್ಯೆ:64171432534 ಮತ್ತು ನಿರ್ದೇಶಕರ ಖಾತೆ ಸಂಖ್ಯೆ:64088089822 ಖಾತೆಗಳನ್ನು ಮುಕ್ತಾಯಗೊಳಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸುತ್ತಿರುವ ಕುಲಸಚಿವರ ಖಾತೆ ಸಂಖ್ಯೆ:64171432534 ಮತ್ತು ನಿರ್ದೇಶಕರ ಖಾತೆ ಸಂಖ್ಯೆ:64088089822 ಖಾತೆಗಳಲ್ಲಿ ಯಾವುದೇ ವಹಿವಾಟು ನಡೆಯುತ್ತಿರುವುದಿಲ್ಲ, ಆದ್ದರಿಂದ ಈ 02 ಖಾತೆಯನ್ನು ಮುಕ್ತಾಯಗೊಳಿಸಲು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಿರ್ವಹಿಸುತ್ತಿರುವ ಕುಲಸಚಿವರ ಖಾತೆ ಸಂಖ್ಯೆ:64171432534 ಖಾತೆಯನ್ನು ಮುಕ್ತಾಯಗೊಳಿಸಲು ಸಭೆಯು ಸೂಚಿಸಿತು.** |
| ವಿಷಯ 5 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ "ಕರ್ನಾಟಕ ಸಂಸ್ಕೃತಾಧ್ಯಯನಮ್" ಎಂಬ ಷಾಣ್ಮಾಸಿಕ ಶೋ( ಪತ್ರಿಕೆ(ಜರ್ನಲ್)ಯ ಬಾಹ್ಯ ತಜ್ಞರಿಗೆ ಪರಿಶೀಲನಾ ಸಂಭಾವನೆಯನ್ನು ನಿಗಧಿ ಪಡಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **"ಕರ್ನಾಟಕ ಸಂಸ್ಕೃತಾಧ್ಯಯನಮ್"** ಎಂಬ ಷಾಣ್ಮಾಸಿಕ ಶೋಧ ಪತ್ರಿಕೆ(ಜರ್ನಲ್)ಯನ್ನು ಪ್ರಕಟಿಸಲಾಗುತ್ತಿದೆ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳು ಸ್ವೀಕೃತವಾಗುತ್ತಿವೆ. ಈ ಪತ್ರಿಕೆಯನ್ನು UGC Care List ನಲ್ಲಿ ನೊಂದಾಯಿಸುವಷ್ಟು ಗುಣಮಟ್ಟವನ್ನು ಕಾಪಾಡಬೇಕಿದೆ. ಹಾಗಾಗಿ ಈ ಲೇಖನಗಳನ್ನು ಬಾಹ್ಯ ತಜ್ಞರಿಂದ ಪರಿಶೀಲನೆಗೊಳಪಡಿಸಬೇಕಾಗಿದೆ. ಈ ಬಾಹ್ಯಪರಿಶೀಲಕರಿಗೆ ಒಂದು ಲೇಖನಕ್ಕೆ ರೂ. 300 ಗಳನ್ನು ನಿಗಧಿ ಪಡಿಸುವ ಸಂಬಂಧ ಹಣಕಾಸು ಸಮಿತಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| ವಿಷಯ 6 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2023-24ನೇ ಸಾಲಿನ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2023-24ನೇ ಸಾಲಿನಲ್ಲಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನವು ರೂ.469.54 ಲಕ್ಷಗಳಿದ್ದು, ಇದರಲ್ಲಿ **ರೂ.422.70 ಲಕ್ಷಗಳನ್ನು Corpus ನಿಧಿಯಾ( ಪರಿವರ್ತಿಸಲು ಸರ್ಕಾರದ ಪತ್ರ ಸಂಖ್ಯೆ: ಇಡಿ 56 ಹೆಚ್‌ಪಿಯು 2022, ದಿನಾಂಕ:30.12.2023** ರಲ್ಲಿ ಅನುಮತಿ ನೀಡಿದ್ದು, ಉಳಿದಿರುವ ಅನುದಾನ ರೂ.46.84 ಲಕ್ಷಗಳಿಗೆ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2023-24ನೇ ಸಾಲಿನಲ್ಲಿರುವ ಎಸ್‌ಸಿಎಸ್‌ಪಿ/ಟಿಎಸ್‌ಪಿ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಅನುಮೋದಿಸಿತು.** |
| ವಿಷಯ 7 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳಿಗೆ ಸಂಬಂಧಿಸಿದ ಭತ್ಯೆಗಳ ದರವನ್ನು ಪರಿಷ್ಕರಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಹಾಗೂ ಇನ್ನಿತರ ಪರೀಕ್ಷೆಗಳಿಗೆ ಈ ಹಿಂದೆ ಇರುವ ಭತ್ಯೆಗಳ ದರವನ್ನು ಪರಿಷ್ಕರಿಸಲು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗದ ಆದಾಯ ಮತ್ತು ವೆಚ್ಚವನ್ನು ಅಂದಾಜು ಮಾಡಲು ಸೂಚಿಸಲಾಯಿತು. ಕೆ ಸಿ ಎಸ್ ಆರ್ ನಿಯಮಾನುಸಾರ ಪರಿಷ್ಕೃತ ದರವನ್ನು ಅಳವಡಿಸಿಕೊಳ್ಳಲು ಸಭೆಯು** |

| | |
|---|---|
| | ಸೂಚಿಸಿತು. |
| **ವಿಷಯ 8** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವೇತನವನ್ನು ಕನಿಷ್ಠ ವೇತನಕ್ಕೆ ಪರಿಷ್ಕರಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ನೌಕರರನ್ನು United Facility Management and Services ಸಂಸ್ಥೆಯಿಂದ ಪಡೆದುಕೊಳ್ಳಲಾಗುತ್ತಿದೆ. ಕಾರ್ಮಿಕ ಇಲಾಖೆ ಅಧಿಕಾರಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರ ವೇತನವನ್ನು ಪರಿಷ್ಕರಿಸಲು ಸೂಚಿಸಿರುತ್ತಾರೆ. ಅದರಂತೆ ಕ್ರಮವಹಿಸಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು United Facility Management and Services ಸಂಸ್ಥೆಗೆ Renewal of Notification ನಲ್ಲಿ ವೇತನ ದರಗಳನ್ನು ಪರಿಷ್ಕರಿಸಿದ್ದು, ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ತಾತ್ಕಾಲಿಕವಾಗಿ United Facility Management and Services ನ ಹೊರಗುತ್ತಿಗೆ ಸೇವೆಯನ್ನು (06) ತಿಂಗಳ ಅವಧಿಗೆ ವಿಸ್ತರಿಸಲು ಸೂಚಿಸಿತು ಹಾಗೂ ನಿಯಮಾನುಸಾರ (01) ವರ್ಷದ ಅವಧಿಗೆ ಸೇವೆಯನ್ನು ವಿಸ್ತರಿಸಲು ಅವಕಾಶವಿದೆಯೇ ಎಂದು ತಿಳಿದನಂತರ ಸೇವೆಯನ್ನು ವಿಸ್ತರಿಸಲು ಸಭೆಯು ಸೂಚಿಸಿತು.** |

| | |
|---|---|
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರೆ ವಿಷಯಗಳು** |
| **ವಿಷಯ 01** | **BS.c in Yoga Therapy And Counseling ಮತ್ತು ಬಿ.ಎ/ಶಾಸ್ತ್ರಿ ಆಗಮ ಕೋರ್ಸ್‌ಗಳನ್ನು 2024-25ನೇ ಸಾಲಿನಲ್ಲಿ ಪ್ರಾರಂಭಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು, ಇಲ್ಲಿ 2024-25ನೇ ಸಾಲಿನಲ್ಲಿ BS.c in Yoga Therapy And Counseling ಮತ್ತು ಬಿ.ಎ/ಶಾಸ್ತ್ರಿ ಆಗಮ ಕೋರ್ಸ್‌ಗಳನ್ನು ನಡೆಸಲು ಹಾಗೂ ಕೋರ್ಸಿಗೆ ನುರಿತ ಅಧ್ಯಾಪಕರನ್ನು ವಿಶ್ವವಿದ್ಯಾಲಯದಿಂದ ನೇಮಿಸಿ ಕೋರ್ಸ್‌ಗೆ ಬರುವಂತಹ ಶುಲ್ಕದಿಂದ ಅಧ್ಯಾಪಕರ ವೇತನವನ್ನು ನೀಡಲು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಸಭೆಯು ಅನುಮೋದಿಸಿತು.** |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

**(ಡಾ. ಭರತ್ ಕೆ.ಎ)**
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

**(ಡಾ. ಎಸ್. ಅಹಲ್ಯ)**
**ಕುಲಪತಿಗಳು**
ಅಧ್ಯಕ್ಷರು

**ದಿನಾಂಕ: 06.03.2024**